Edit with WPS Office

5 ನೆ ತರಗತಿ

ವಿಷಯ : ಕನ್ನಡ

ದಿನಾಂಕ : 02-09-2020

ಪದ್ಯ ಪಾಠ : ಕನ್ನಡ ನುಡಿ

ಇ) ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

1) ಕನ್ನಡದ ನುಡಿಯಲ್ಲಿ ಏನೇನು ಅಡಗಿದೆ?

ಉ : ಕನ್ನಡದ ನುಡಿಯಲ್ಲಿ ಹೃದಯದ ಒಲುಮೆಯು, ಹಾಲಿನ ತೊರೆಯು, ಸಕ್ಕರೆ ಮಳಲು, ಜೇನಿನ ಹನಿಯು ತುಂಬಿದೆ.

2) ಪುಣ್ಯಕೋಟಿ ಕಥೆಯು ಏನನ್ನು ತಿಳಿಸುತ್ತದೆ?

ಉ : ಪುಣ್ಯಕೋಟಿ ಕಥೆಯು ಬದುಕಿನ ಚರಿತೆಯನ್ನು ತಿಳಿಸುತ್ತದೆ.

3) ಕವಿಯು ಶರಣರ ವಚನಗಳನ್ನು ಏನೆಂದು ಬಣ್ಣಿಸಿದ್ದಾರೆ?

ಉ : ಕವಿಯು ಶರಣರ ವಚನಗಳನ್ನು ಬದುಕಿನ ಅಮೃತ ಕಣಜಗಳು ಎಂದು ಬಣ್ಣಿಸಿದ್ದಾರೆ.

4) ದಾಸಸಾಹಿತ್ಯವನ್ನು ಕವಿ ಯಾವ ರೀತಿ ಬಣ್ಣಿಸಿದ್ದಾರೆ?

ಉ : ದಾಸಸಾಹಿತ್ಯವನ್ನು ಸುಂದರವಾದ, ಪ್ರೀತಿಯ ಕನ್ನಡದ ಹವಳಗಳು ಎಂದು ಬಣ್ಣಿಸಿದ್ದಾರೆ.

ಭಾಷಾಭ್ಯಾಸ :

ಅ ) ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಉಪಯೋಗಿಸಿರಿ.

1) ಚಿತ್ತ : ನಮ್ಮ ಚಿತ್ತ ಓದಿನತ್ತ ಇರಬೇಕು.

2) ಒಲುಮೆ : ನಾವು ಶಾಲೆಯಲ್ಲಿ, ಮನೆಯಲ್ಲಿ ಎಲ್ಲರನ್ನು ಒಲುಮೆಯಿಂದ ಕಾಣಬೇಕು.

3) ಜನಪದ : ಜನಪದ ಹಾಡುಗಳು ಕೇಳಲು ಸುಂದರವಾಗಿರುತ್ತವೆ.

ಆ ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ.

ಮಾದರಿ : ಪುಣ್ಯ × ಪಾಪ

1) ಮೂಡು × ಮುಳುಗು

2) ಧರ್ಮ × ಅಧರ್ಮ

3) ಅರಳು × ಬಾಡು ( ಮುದುಡು )

ಇ ) ಈ ಪದಗಳಿಗೆ ಏಕವಚನ ರೂಪ ಬರೆಯಿರಿ

ಬಹುವಚನ ಏಕವಚನ

Edit with WPS Office

| | |
|---|---|
| 1)ಮಕ್ಕಳು | ಮಗು |
| 2) ಗುಡಿಗಳು | ಗುಡಿ |
| 3) ತೊರೆಗಳು | ತೊರೆ |
| 4) ಶರಣರು | ಶರಣ |
| 5) ಹವಳಗಳು | ಹವಳ |